ಕ್ಷೇತ್ರದ ಯೋಜಿತ ಬೆಳವಣಿಗೆಗಾಗಿ ಯೋಜನೆಯನ್ನು ರೂಪಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಮಿತಿಗೆ ನಿರ್ದೇಶಿಸಲಾಗಿದೆ

708 (922) ಶ್ರೀ ರಘುಪತಿ ಭಟ್ ಕೆ (ಉಡುಪಿ) – ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಮತ್ತು ಗ್ರಾಮೀಣ ಪ್ರದೇಶ ಎಂಬ ಭೇದವಿಲ್ಲದೆ ಎಲ್ಲಾ ಪ್ರದೇಶದ ನಾಗರಿಕರಿಗೆ ಸಮಾನವಾಗಿ ಸೀಮೆಎಣ್ಣೆ ಒದಗಿಸುವಲ್ಲಿ ಸರ್ಕಾರದ ನಿಲುವೇನು ,

ಆ) ಬಿ ಪಿ ಎಲ್ ಕಾರ್ಡುದಾರರಿಗೆ ನೀಡುವಂತೆ ಎ ಪಿ ಎಲ್ ಕಾರ್ಡುದಾರರಿಗೂ ಮಾಸಿಕ ಕನಿಷ್ಠ 5 ಲೀಟರ್ ಸೀಮೆಎಣ್ಣೆ ಒದಗಿಸಲು ಸರ್ಕಾರ ಸಿದ್ಧರಿರುವುದೇ ,

ಇ) ಈ ವಿಚಾರದಲ್ಲಿ ಜನರಿಂದ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ,

ಈ) ಹಾಗಿದ್ದಲ್ಲಿ, ಸರ್ಕಾರ ಕ್ರಮ ಕೈಗೊಳ್ಳುವುದೇ ,

ಉ) ಎಷ್ಟು ಕಾಲಾವಧಿಯೊಳಗೆ ವಿತರಿಸಲಾಗುವುದು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯ ಸರ್ಕಾರವು ರಾಜ್ಯದಾದ್ಯಂತ ಏಕ ರೂಪ ಪ್ರಮಾಣದಲ್ಲಿ ಸೀಮೆಎಣ್ಣೆಯನ್ನು ಪಡಿತರ ಚೀಟಿದಾರರಿಗೆ ಕನಿಷ್ಠ ತಲಾ 5 ಲೀಟರ್‌ನಂತೆ ವಿತರಿಸಲು ಕ್ರಮ ಕೈಗೊಳ್ಳಲು, ಗ್ರಾಮೀಣ ಪ್ರದೇಶ, ಪಟ್ಟಣ ಪ್ರದೇಶ ಮತ್ತು ಪಡಿತರ ವ್ರದೇಶಗಳಲ್ಲಿನ ಪಡಿತರ ಚೀಟಿ ಪ್ರಮಾಣಗನುಗುಣವಾಗಿ ವಿತರಿಸಲು 54,604 ಕೆ ಎಲ್ ಸೀಮೆಎಣ್ಣೆ ಬೇಕಾಗುತ್ತದೆ ಮೀನುಗಾರಿಕೆಗೆ ನೀಡುವ 752 ಕೆ ಎಲ್ ಸೇರಿ 55,356 ಕೆ ಎಲ್ ಸೀಮೆಎಣ್ಣೆ ಬೇಕಾಗುತ್ತದೆ

ಕೇಂದ್ರ ಸರ್ಕಾರದಿಂದ ಈಗ ನೀಡುತ್ತಿರುವ 49,416 ಕೆ ಎಲ್ ಸೀಮೆಎಣ್ಣೆಯಲ್ಲಿ ಸಮಾನವಾಗಿ ಗ್ರಾಮಾಂತರ ವ್ರದೇಶದಲ್ಲಿ 77 56 ಲಕ್ಷ ಅನಿಲ ರಹಿತ ಪಡಿತರ ಚೀಟಿಗಳಿರುವುದರಿಂದ 4 ಲೀಟರ್‌ನಂತೆ ನೀಡಿ, ಪಟ್ಟಣ ವ್ರದೇಶಗಳಲ್ಲಿನ 8 76 ಲಕ್ಷ ಪಡಿತರ ಚೀಟಿದಾರರಿಗೆ 5 ಅಥವಾ 6

32/4

ಲೀಟರ್‌ನಂತೆ ಮತ್ತು ನಗರ ಪ್ರದೇಶದಲ್ಲಿನ 19 ಲಕ್ಷ ಪಡಿತರ ಚೀಟಿದಾರರಿಗೆ 7 ಲೀಟರ್‌ನಂತೆ ವಿತರಿಸಲಾಗುತ್ತಿದೆ

ಒಂದು ವೇಳೆ ಗ್ರಾಮಾಂತರ ಪ್ರದೇಶಕ್ಕೆ 5 ಲೀಟರ್‌ನಂತೆ ವಿತರಿಸಲು ಕನಿಷ್ಟ 5000 ಕೆ ಎಲ್ ಹೆಚ್ಚುವರಿ ಸೀಮೆಎಣ್ಣೆ ಬೇಕಾಗುತ್ತದೆ ಹಾಗಾಗಿ ಏಕ ರೂಪದಲ್ಲಿ ರಾಜ್ಯದಾದ್ಯಂತ ಸೀಮೆಎಣ್ಣೆ ವಿತರಣೆ ಸಾಧ್ಯವಾಗಿರುವುದಿಲ್ಲ

ಆ) ರಾಜ್ಯದಲ್ಲಿನ ಎಲ್ಲಾ ಅನಿಲ ರಹಿತ ಬಿಪಿಎಲ್, ಎಪಿಪೆಲ್, ಅಂತ್ಯೋದಯ ಪಡಿತರ ಚೀಟಿಗಳಿಗೆ ಸೀಮೆಎಣ್ಣೆಯನ್ನು ಆಯಾ ಪ್ರದೇಶಕ್ಕೆ ಅನುಗುಣವಾಗಿ ಸಮಾನವಾಗಿ ನೀಡಲಾಗುತ್ತಿದೆ

ಇ) ಅನಿಲ ಸಂಪರ್ಕ ಹೊಂದಿದ ಪಡಿತರ ಚೀಟಿದಾರರು ತಮಗೂ 2 ಲೀಟರ್ ಸೀಮೆಎಣ್ಣೆ ನೀಡಲು ಕೆಲವು ಜಿಲ್ಲೆಗಳಲ್ಲಿ ಕೋರುತ್ತಿರುತ್ತಾರೆ

ಈ) ಪ್ರಸ್ತುತ ಕೇಂದ್ರ ಸರ್ಕಾರದಿಂದ ನೀಡುತ್ತಿರುವ ಹಂಚಿಕೆ ಅತ್ಯಂತ ಕಡಿಮೆ ಇರುವುದರಿಂದ ಅನಿಲ ಸಂಪರ್ಕ ಹೊಂದಿದ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆ ನೀಡಲು ಸಾಧ್ಯವಿರುವುದಿಲ್ಲ

ಉ) ಅನ್ವಯಿಸುವುದಿಲ್ಲ

709 (1127) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬಿ ಪಿ ಎಲ್ ಕಾರ್ಡುದಾರರ ಸಮೀಕ್ಷೆಯನ್ನು ಮುಕ್ತಾಯಗೊಳಿಸಿ, ಕಾರ್ಡು ಹಂಚುವ ಕಾರ್ಯ ಮುಗಿದಿದೆಯೇ ,

ಆ) ಹಾಗಿದ್ದಲ್ಲಿ, ವಿತರಿಸಲಾದ ಬಿ ಪಿ ಎಲ್ ಕಾರ್ಡುಗಳ ಸಂಖ್ಯೆ ಎಷ್ಟು, (ಕ್ಷೇತ್ರವಾರು ವಿವರ ನೀಡುವುದು) ,

ಇ) ಬಿ ಪಿ ಎಲ್ ಕಾರ್ಡು ವಿತರಣೆಗೆ ಸರ್ಕಾರ ಶೇಕಡವಾರು ಮಿತಿ ಹಾಕಲಾಗಿದೆಯೇ , ಹಾಗಿದ್ದಲ್ಲಿ, ಚಿಕ್ಕಮಗಳೂರು ಜಿಲ್ಲೆಗೆ ಹಾಕಿರುವ ಮಿತಿ ಏನು,

ಈ) ಈ ಮಿತಿಯಿಂದ ಅರ್ಹ ಬಡವರಿಗೂ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ?